

**ನಿಯಮಗಳಿವೆಯೇ?**

ಮೆದುಳು ನಿಷ್ಕ್ರಿಯವಾದರೂ ವ್ಯಕ್ತಿಯ ಹೃದಯದ ಬಡಿತ ನಿಲ್ಲುವವರೆಗೂ ಕೆಲವು ಅಂಗಗಳನ್ನು ದಾನ ಮಾಡಬಹುದು. ಬ್ರೈನ್ ಡೆಡ್ ಆದ ಕೆಲವೇ ಗಂಟೆಗಳಲ್ಲಿ ಅಂದರೆ, ಮುಖ್ಯವಾಗಿ ಹೃದಯದ ಬಡಿತ ನಿಲ್ಲುವ ಮೊದಲೇ ಹೃದಯ, ಲಿವರ್, ಕಿಡ್ನಿ, ಶ್ವಾಸಕೋಶ, ಪಿತ್ತಜನಕಾಂಗಗಳನ್ನು ತೆಗೆಯಬೇಕಾಗುತ್ತದೆ. ಇಲ್ಲದಿದ್ದರೆ ಇದು ಮತ್ತೊಬ್ಬರಿಗೆ ಕಸಿ ಮಾಡಲು ಯೋಗ್ಯವಾಗಿರುವುದಿಲ್ಲ. ಹೃದಯದ ಬಡಿತ ನಿಂತ ಕೆಲವೇ ನಿಮಿಷದ ಒಳಗಾಗಿ ಕಣ್ಣು, ಚರ್ಮ, ಮೂಳೆಗಳನ್ನು ತೆಗೆಯಬಹುದು.

◆ **ಮಧುಮೇಹ, ಬಿ.ಪಿ. ಮುಂತಾದ ಜೀವನಶೈಲಿ ಕಾಯಿಲೆ ಇದ್ದ ವ್ಯಕ್ತಿಯ ಮೆದುಳು ಕಾರ್ಯ ಸ್ಥಗಿತಗೊಂಡರೆ ಆಗಲೂ ಆತನ ಅಂಗಗಳು ದಾನಕ್ಕೆ ಯೋಗ್ಯವೇ?**

ಸಾಮಾನ್ಯವಾಗಿ ಮಧುಮೇಹ, ರಕ್ತದೊತ್ತಡ, ಕ್ಯಾನ್ಸರ್, ಎಚ್‌ಐವಿ ರೋಗ ಹೊಂದಿದ ವ್ಯಕ್ತಿಯ ಮೆದುಳು ನಿಷ್ಕ್ರಿಯವಾದರೆ, ಅಂಥವರ ಅಂಗಾಂಗಗಳು ದಾನಕ್ಕೆ ಯೋಗ್ಯವಾಗಿರುವುದಿಲ್ಲ. ಏಕೆಂದರೆ ಇಂಥ ವ್ಯಕ್ತಿಗಳ ದೇಹ ಈಗಾಗಲೇ ರೋಗಕ್ಕೆ ತುತ್ತಾಗಿರುತ್ತದೆ. ಇದನ್ನು ಬೇರೆಯವರಿಗೆ ಕಸಿ ಮಾಡಿದರೆ ಅವರಿಗೂ ರೋಗ ತಗಲುವ ಅಪಾಯ ಇರುತ್ತದೆ. ■

ದಾನ ಮಾಡಿದವರ ಗರಿಷ್ಠ ಸಂಖ್ಯೆ ಇದಾಗಿದೆ.

ಅಂಗಾಂಗ ದಾನಕ್ಕೆ ಉತ್ತೇಜನ ನೀಡುವುದು ಹಾಗೂ ಮೃತ ದಾನಿಗಳಿಂದ ಅಂಗಾಂಗ ಒದಗಿಸುವ ಕಾರ್ಯವನ್ನು ‘ಸೊಟ್ಟೊ’ ಮಾಡುತ್ತಿದೆ. ಮೆದುಳು ನಿಷ್ಕ್ರಿಯಗೊಂಡ ಬಳಿಕ ಕುಟುಂಬ ಸದಸ್ಯರ ಒಪ್ಪಿಗೆ ಮೇರೆಗೆ ಅಂಗಾಂಗಗಳನ್ನು ದಾನವಾಗಿ ಪಡೆಯಲಾಗುತ್ತದೆ. 2019ರಲ್ಲಿ 105 ಮಂದಿಯಿಂದ ಅಂಗಾಂಗಗಳನ್ನು ಸಂಗ್ರಹಿಸಲಾಗಿತ್ತು. ಈವರೆಗೆ ಇದೇ ಗರಿಷ್ಠ ಸಂಖ್ಯೆಯಾಗಿತ್ತು. ಕೋವಿಡ್‌ನಿಂದಾಗಿ 2020ರಲ್ಲಿ 35 ಹಾಗೂ 2021ರಲ್ಲಿ 70 ಮಂದಿ ಮಾತ್ರ ಅಂಗಾಂಗ ದಾನ ಮಾಡಿದ್ದರು.

## ಜೀವದ ಸಾರ್ಥಕತೆ ‘ಜೀವ ಸಾರ್ಥಕತೆ’

‘ಜೀವ ಸಾರ್ಥಕತೆ’ ಎನ್ನುವುದು ರಾಜ್ಯ ಸರ್ಕಾರದ ಆರೋಗ್ಯ ಇಲಾಖೆ ಸ್ಥಾಪಿಸಿದ ಅಂಗಾಂಗ ದಾನ ನೋಂದಣಿ ಮಾಡುವ ಸಂಸ್ಥೆ. ನಮ್ಮ ರಾಜ್ಯದಲ್ಲಿ ಅಂಗಾಂಗ ದಾನದ ಬಗ್ಗೆ ಜನರಲ್ಲಿ ಈಗೀಗ ಅರಿವು ಮೂಡುತ್ತಿದೆ. ಅಂಗಾಂಗ ದಾನ ಮಾಡುವವರ ಸಂಖ್ಯೆ ಏರುತ್ತಿದ್ದರೂ ಅಪೇಕ್ಷಿತರ ಸಂಖ್ಯೆ ಇದಕ್ಕಿಂತ ಬಹಳ ಹೆಚ್ಚಾಗಿದೆ. ಹೀಗಾಗಿ ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಇನ್ನೂ ತ್ವರಿತವಾಗಿ ಮಾಡಬೇಕಾಗಿದೆ.

‘ಜೀವ ಸಾರ್ಥಕತೆ ಯೋಜನೆಯಡಿ ನೋಂದಣಿ ಮಾಡಿದ ರೋಗಿಗೆ ಸಂಸ್ಥೆಯೇ ಅಂಗಾಂಗವನ್ನು ಸರದಿಯಂತೆ ನೀಡುತ್ತಿದೆ. ಅಪಘಾತ ಮತ್ತಿತರ ಕಾರಣಗಳಿಂದ ಮೆದುಳು ನಿಷ್ಕ್ರಿಯಗೊಂಡಿದ್ದ ವ್ಯಕ್ತಿ ದಾನ ಮಾಡಲು ಸಾಧ್ಯವಿರುವ ಎಲ್ಲ ಅಂಗಾಂಗ ದಾನ ಮಾಡಿದರೆ ಎಂಟರಿಂದ ಹತ್ತು ರೋಗಿಗಳ ಜೀವ ಉಳಿಸಬಹುದು. ಹೃದಯ, ಕಿಡ್ನಿ,

**ವರ್ಷವಾರು ದಾನಿಗಳಿಂದ ಬಂದ ಅಂಗಾಂಗ ವಿವರ**

| ವರ್ಷ | 2017 | 2018 | 2019 | 2020 | 2021 | 2022 |
|---|---|---|---|---|---|---|
| ಅಂಗಾಂಗಗಳು | | | | | | |
| ಹೃದಯ | 24 | 31 | 27 | 08 | 22 | 41 |
| ಶ್ವಾಸಕೋಶ | 04 | 14 | 29 | 06 | 10 | 10 |
| ಪಿತ್ತಜನಕಾಂಗ | 61 | 79 | 80 | 27 | 61 | 107 |
| ಕಿಡ್ನಿ | 90 | 132 | 160 | 53 | 92 | 202 |
| ಪಿತ್ತಜನಕಾಂಗ ಮತ್ತು ಕಿಡ್ನಿ | 07 | 03 | 06 | 03 | 03 | 03 |
| ಹೃದಯ ಮತ್ತು ಶ್ವಾಸಕೋಶ | 0 | 0 | 01 | 01 | 01 | 01 |
| ಕಿಡ್ನಿ ಮತ್ತು ಮೇದೋಜೀರಕ | 04 | 03 | 03 | 0 | 03 | 03 |